**105. ಬಜೆಟ್ ಅಂದಾಜುಗಳು 1991-92**

ರಾಜ್ಯ ತೆರಿಗೆಗಳಿಂದ, 1990-91ರಲ್ಲಿ ಬಂದಿದ್ದಕ್ಕಿಂತಲೂ ಹೆಚ್ಚಿಗೆಯಾಗಿ 4115.37 ಕೋಟಿ ರೂಪಾಯಿಗಳು ದೊರಕುವ ನಿರೀಕ್ಷೆಯಿದೆ. ಅನೇಕ . ತೆರಿಗೆಗಳ ಪೈಕಿ ಮಾರಾಟ ತೆರಿಗೆಯಿಂದ ಅತ್ಯಂತ ಹೆಚ್ಚಿನ ಆದಾಯ ಬರಲಿದ್ದು ಇದರಿಂದ 231.00 ಕೋಟಿ ರೂಪಾಯಿ ಆದಾಯ ದೊರಕುವ ನಿರೀಕ್ಷೆಯಿದೆ. ಕೇಂದ್ರ ತೆರಿಗೆಗಳಲ್ಲಿಯ ನಮ್ಮ ಪಾಲು 61.43 ಕೋಟಿ ರೂಪಾಯಿಗೆ ಹೆಚ್ಚುವ ಸಂಭವವಿದೆ. 1991-92ರ ರಾಜಸ್ವ ಜಮೆ 4817.91 ಕೋಟಿ ರೂಪಾಯಿ ಆಗಬಹುದೆಂದು ನಿರೀಕ್ಷಿಸಲಾಗಿದೆ. ನಿವ್ವಳ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಯನ್ನು ಅನುಬಂಧ-XIIರಲ್ಲಿ ಕೊಡಲಾಗಿದೆ. 1991-92ರ ರಾಜಸ್ವ ವೆಚ್ಚ 4815-46 ಕೋಟಿ ರೂಪಾಯಿಯಾಗಲಿದ್ದು ಇದು ಹೆಚ್ಚುವರಿ ಸಂಪನ್ಮೂಲ

ಸಂಗ್ರಹಣೆ ಕ್ರಮಗಳಿಂದ ಆದಾಯ ಬರುವುದಕ್ಕೂ ಮೊದಲು ರಾಜಸ್ವ ಲೆಕ್ಕದ ಮೇಲೆ 2.45 ಕೋಟಿ ರೂಪಾಯಿಗಳ ಸ್ವಲ್ಪ ಉಳಿತಾಯವನ್ನುಂಟು ಮಾಡುತ್ತದೆ. ಬಂಡವಾಳಲೆಕ್ಕದ ವ್ಯವಹಾರಗಳನ್ನು ಗಣನೆಗೆ ತೆಗೆದುಕೊಂಡರೆ ವರ್ಷದಲ್ಲಿ 54.53 ಕೋಟಿ ರೂಪಾಯಿಗಳ ಕೊರತೆ ಉಂಟಾಗಲಿದ್ದು ಅದು, 11.14 ಕೋಟಿ ರೂಪಾಯಿ ಆರಂಭದ ಕೊರತೆಯನ್ನು ಗಣನೆಗೆ ತೆಗೆದುಕೊಂಡರೆ (-) 63.22 ಕೋಟಿ ರೂಪಾಯಿ ಅಂತ್ಯದ ಶಿಲ್ಕು ಆಗುತ್ತದೆ. ಇದನ್ನು ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಯಿಂದ ಸ್ವಲ್ಪ ಮಟ್ಟಿಗೆ ತುಂಬಿಕೊಳ್ಳಲಾಗುವುದು. ಉಳಿದ ಕೊರತೆಯನ್ನು ಸಹ ಬಹುಮಟ್ಟಿಗೆ, ವರ್ಷಾವಧಿಯಲ್ಲಿ ತೆರಿಗೆಗಳಿಂದ ನಿರೀಕ್ಷಿಸುವ ಸ್ವಾಭಾವಿಕ ಹೆಚ್ಚಳದಿಂದ ಮತ್ತು ಹೆಚ್ಚು ದಕ್ಷತೆಯಿಂದ ವಸೂಲಿ ಮಾಡುವ ಮೂಲಕ ತುಂಬಿಕೊಳ್ಳಲಾಗುವುದು.

**106. 1991-92ರ ಬಜೆಟ್ ಅಂದಾಜುಗಳು**

1991-92ನೇ ಸಾಲಿನ ಕೊರತೆಗಳನ್ನು ವರ್ಷಾವಧಿಯಲ್ಲಿ ತೆರಿಗೆಗಳಿಂದ ನಿರೀಕ್ಷಿಸಿರುವ ಮೊತ್ತದಿಂದ ಮತ್ತು ದಕ್ಷ ರೀತಿಯಲ್ಲಿ ತೆರಿಗೆ ಸಂಗ್ರಹಿಸುವ ಮೂಲಕ ಹಾಗೂ ಕೇಂದ್ರದ ನೆರವಿನ ನ್ಯಾಯೋಚಿತ ಹಂಚಿಕೆ ಮೂಲಕ ಸರಿದೂಗಿಸಲೂ ನಿರೀಕ್ಷಿಸುತ್ತೇನೆ. ನಾನು ಈಗ 1991-92ನೇ ಸಾಲಿನ ಬಜೆಟ್ ಅಂದಾಜುಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸುತ್ತೇನೆ ಹಾಗೂ ಸೆಪ್ಟೆಂಬರ್ 30, 1991ಕ್ಕೆ ಕೊನೆಗೊಳ್ಳುವ ಆರು ತಿಂಗಳ ಅವಧಿಗಾಗಿ ಲೇಖಾನುದಾನ ನೀಡಬೇಕಾಗಿ ವಿನಂತಿಸುತ್ತೇನೆ.

(ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನೊಳಗೊಂಡಂತೆ ಇತರೆ ಬಿ.ಜೆ.ಪಿ. ಸದಸ್ಯರು ಈ ಬಜೆಟ್‌ನಲ್ಲಿ ರೈತರ ಸಾಲದ ಬಗ್ಗೆ ಆಗಲಿ, ರೈತರ ಸಮಸ್ಯೆಗಳ ಬಗ್ಗೆ ಆಗಲಿ ಏನನ್ನು ಪ್ರಸ್ತಾಪ ಮಾಡಿಲ್ಲ, ಆದ್ದರಿಂದ ಈ ಬಜೆಟ್‌ನ್ನು ವಿರೋಧ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆಂದು ಹೇಳಿ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಎಸ್.ಎಚ್. ಕೌಜಲಗಿ ; ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಭಾಷಣದಲ್ಲಿ ರೈತರ ಸಮಸ್ಯೆಗಳ ಬಗ್ಗೆ ಏನನ್ನೂ ಪ್ರಸ್ತಾಪ ಮಾಡದೆ ಇರುವುದರಿಂದ ನಾನು ಈ ಬಜೆಟ್ ಭಾಷಣವನ್ನು ಹರಿದು ಹಾಕುತ್ತೇನೆ.

(ಶ್ರೀ ಎಸ್.ಎಚ್. ಕೌಜಲಗಿಯವರು ಬಜೆಟ್ ಭಾಷಣದ ಪ್ರತಿಯನ್ನು ಹರಿದು ಬಿಸಾಕಿದರು)

(ಗೊಂದಲ)

ಅಧ್ಯಕ್ಷರು; ಒಂದು ಮುಖ್ಯವಾದ ಪ್ರಕಟಣೆ ಇದೆ; ತಾವೆಲ್ಲ ಕುಳಿತುಕೊಳ್ಳಿ.